Sri H. M. CHANNABASAPPA.—If people are prepared to go and settle down in North Kanara district and if lands are available, Government will certainly examine the question.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಡಕೆತೋಟ ಮುಳುಗಡೆಯಾಗುವವರಿಗೆ ಪರಿಹಾರ ಮೊದಲೊಂಡು ಎಲ್ಲವನ್ನೂ ಕೊಡುತ್ತೀರಿ. ಆಹಾರಧಾನ್ಯಗಳನ್ನು ಬೆಳೆಯುವುದಕ್ಕೇ ಜಮೀನು ಇಲ್ಲದೆ ಇರುವಾಗ ಅಡಕೆ ತೋಟದವರಿಗೆ ಎಷ್ಟು ಜಮೀನು ಕೊಡುತ್ತೀರಿ? ಅಡಕೆ ಬೆಳೆ ಕಡಮೆಯಾದರೆ ಅದರಿಂದ ದೇಶದ ಜನರಿಗೆ ಇರುವ ತೊಂದರೆ ಏನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯ ಜನರು ಅಡಕೆ ಉಪಯೋಗಮಾಡುವುದನ್ನು ಕಡಮೆ ಮಾಡಬೇಕಾಗಿ ಬರುತ್ತದೆ. ಮತ್ತು ಅದರಿಂದ ಬರತಕ್ಕ ಪ್ರಯೋಜನ ಜನಗಳಿಗೆ ತಪ್ಪಿಹೋಗುತ್ತದೆ. ಈ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಹೆಚ್ಚಿಗೆ ಬೆಳೆಸಬೇಕಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೆಚ್ಚು ಬೆಳೆಯದೆ ಇದ್ದರೆ ಅದರಿಂದ ತೊಂದರೆ ಏನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಡಕೆ ಇಲ್ಲದಿರುವುದೇ ಅದರ ಪರಿಣಾಮ.

Dr. K. K. HEGDE (Minister for Public Health).—Sir, the concerned Minister will be coming in a few minutes; Question No. 91 may be taken up later.

Mr. SPEAKER.—Then, we will take up the question tomorrow.

Sri C. M. ARUMUGHAM.—Sir, it is a question of joint responsibility here. When the Education Minister is not here to answer the question, the Deputy Minister for Education is there to answer or somebody else may answer.

Mr. SPEAKER.—Apart from the question of collective responsibility, the concerned Minister has just gone out for some urgent work. So far as the ministerial responsibility is concerned, I and everybody are aware that there is collective responsibility. But, you cannot force collective responsibility on the Government in a particular matter.

Sri C. M. ARUMUGHAM.—Apart from collective responsibility, if the Deputy Minister for Education is not able to answer, then what is the good of having the Deputy Minister?

Mr. SPEAKER.—It is going to be answered, if not to-day, to-morrow.

Disposal of Mutation Slips in Taluk Office, Chamarajanagar.

*Q.—95. Sri U. M. MADAPPA (Chamarajanagar).—

Will the Government be pleased to state:—

(*a*) the number of mutation slips pending in the Taluk Office, Chamarajanagar;

(*b*) since how long they are pending;

(*c*) whether the existing staff is able to dispose of these pending slips along with current year's slips;

(*d*) if not, the action taken to dispose them early?

A.—Sri KADIDAL MANJAPPA (Minister for Revenue).—

(*a*)—

19,030 as on 1st November 1959.

(*b*)—

		Rs.
1950–51	... ...	336
1951–52	... ...	50
1952–53	... ...	295
1953–54	... ...	1,025
1954–55	... ...	1,160
1955–56	... ...	2,204
1956–57	... ...	3,280
1957–58	... ...	3,745
1958–59	... ...	5,868
1959–60	... ...	1,067
Total	...	19,030

(*c*) Proposals for additional staff have not been received so far and if received, will be duly considered.

(*d*) The Tahsildars have been instructed to visit the villages where there is heavy pendency of mutation cases and attend to their disposal in the villages themselves, as such a course is found to facilitate prompt and expeditious disposal on the spot, avoiding inconvenience to the parties in going over to the Taluk Offices for enquiry, etc. With a view to relieve the present congestion, the Taluk Sheristedars are also attending to the disposal of cases by camping in the Villages on holidays.

ಶ್ರೀ ಯು. ಎಂ. ಮಾದಪ್ಪ.—1950-51ನೆಯ ಇಸವಿಯಿಂದ ಇದುವರೆಗೆ ಸಾಏರಾರು ಮ್ಯೂಟೇಷನ್ ಸ್ಲಿಪ್‌ಗಳು ಪೆಂಡಿಂಗ್ ಬರುತ್ತಾ ಇರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಕಾರಣ ಪ್ರೊಸೀಜರ್ ಸ್ವಲ್ಪ ಕಾಂಪ್ಲಿಕೇಟೆಡ್ ಆಗಿತ್ತು. ಸಿಬ್ಬಂದಿ ಕಡಮೆಯಾಗಿತ್ತು. ಆ ಪ್ರೊಸೀಜರನ್ನು ಈಗ ಸಿಂಪ್ಲಿಫೈ ಮಾಡಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಸ್ಟ್ಯಾಫ್ ಕಡಮೆ ಎಂದು ಗೊತ್ತಾದ ಮೇಲೆ, ಸ್ಟ್ಯಾಫನ್ನು ಏತಕ್ಕೋಸ್ಕರ ಹೆಚ್ಚಿಸಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಾಗಲೇ ಅರಿಯರ್ಸ್ ಕ್ಲಿಯರ್ ಮಾಡುತ್ತಾ ಬಂದಿದ್ದಾರೆ. ಆದರೂ ಕೆಲವು ವರ್ಷಗಳದ್ದು ಮಾತ್ರ ಉಳಿದಿವೆ. ಆದರೆ ಹೆಚ್ಚಿನ ಸಿಬ್ಬಂದಿವರ್ಗಕ್ಕಾಗಿ ಯಾವ ನಲಹೆಗಳೂ ಇದುವರೆಗೆ ಬಂದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಡೆಪ್ಯುಟಿ ಕಮಿಷನರ್ ಸಬ್-ಡಿವಿಷನ್ ಆಫೀಸರ್‌ಗಳು ಪ್ರತಿ ವರ್ಷ, ಕೆಲವು ತಾಲ್ಲೂಕ್ ಆಫೀಸುಗಳ ಇನ್‌ಸ್ಪೆಕ್ಷನ್ನಿಗೆ ಹೋದಾಗ ಇನ್‌ಸ್ಪೆಕ್ಷನ್ ಮಾಡಿದ್ದೇವೆ, ಎಲ್ಲಾ ಲೆಕ್ಕಗಳು ಸರಿಯಾಗಿವೆ," "Inspected and accounts found correct" ಎಂದು ಇನ್‌ಸ್ಪೆಕ್ಷನ್ ಬುಕ್‌ನಲ್ಲಿ ಬರೆದಿರುವುದನ್ನು ರುಜುವಾತು ಮಾಡಿದರೆ ಆಗ ನನ್ನ ಮಾತನ್ನು ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಹಾಗೆ ತಡ ಆಗಿರಬಹುದು. ಆದರೆ ಈ ಸಂದರ್ಭದಲ್ಲಿ ಹಾಗೆ ಆಗಿದೆಯೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—1950-51ನೆಯ ಇಸವಿಯಿಂದ 1959-60ರವರೆಗೆ ಆಯಾ ಫೀರಿಯಡ್ಡಿನಲ್ಲಿ ಯಾವ ಯಾವ ಗುಮಾಸ್ತರುಗಳು ಇದ್ದರು, ಯಾವ ಯಾವ ಅಮಲ್ದಾರ್ ಇದ್ದರು, ಅವರು ಆ ರೀತಿ ಅರಿಯರ್ಸ್ ಬಿಡುವುದಕ್ಕೆ ಕಾರಣವೇನು, ಅವರ ಜವಾಬ್ದಾರಿಯೇನು, ಎಂಬುದನ್ನು ಮನಗಂಡು ಸರ್ಕಾರದವರು ಈ ಅರಿಯರ್ಸ್ ಜಾಗ್ರತೆಯಾಗಿ ಕ್ಲಿಯರ್ ಮಾಡಬೇಕೆಂದು ಏಕೆ ಒಂದು ನೂಚನೆ ಕೊಡುವ ಕ್ರಮವನ್ನು ತೆಗೆದುಕೊಳ್ಳಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಮಾಡಲಿಕ್ಕಾಗಲಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಹಾಗಿದ್ದ ಪಕ್ಷದಲ್ಲಿ ಈ ರೀತಿಯೇ ಇತರ ತಾಲ್ಲೂಕು ಆಫೀಸುಗಳಿಗೂ ಲೀನಿಯನ್ಸಿ ಕೋರಿಸಿಕೊಂಡು ಬಂದರೆ, ಪೆಂಡಿಂಗಿಗೆ ಜವಾಸ್ತಿ ಅವಕಾಶವಾಗಿ ಸರ್ಕಾರಕ್ಕೆ ಹೆಚ್ಚಿಗೆ ಲುಕ್ಸಾನು ಆಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಲುಕ್ಸಾನು ಆಗುವುದಕ್ಕೆ ಏಲ್ಲಾ ಕಡೆಯೂ ಇಷ್ಟೊಂದು ಪೆಂಡಿಂಗ್ ಇಲ್ಲ.

Collection of Agricultural Income-Tax in the State

*Q.—98. Sri G. B. SHANKAR RAO (Hirekerur).—

Will the Government be pleased to state :—

(a) the amount of agricultural income-tax collected for the years 1956-57, 1957-58 and 1958-59 in the State;

(b) the amount of tax still due for the said years ;

(c) the amount of expenditure incurred on the establishment including the pay of the staff, etc. ?

A.—Sri T. MARIAPPA (Minister for Finance).—

(a) Amount of Agricultural Income-Tax collected for the years :—

	Rs.	nP.
1956-57 ...	28,83,940	99
1957-58 ...	24,64,368	39
1958-59 ...	1,03,63,191	00

(b)—

1956-57 ...	46,191	37
1957-58 ...	3,55,616	16
1958-59 ...	7,21,549	21

(c)—

1956-57 ...	30,969	30
1957-58 ...	55,466	71
1958-59 ...	1,58,475	00

Sri G. B. SHANKAR RAO.—May I know whether the amount of expenditure of D.A. and other expenses are also included ?

ಶ್ರೀ ಟಿ. ಮರಿಯಪ್ಪ.—ಅದೆಲ್ಲಾ ಇನ್‌ಕ್ಲೂಡ್ ಆಗಿದೆ.

Sri G. B. SHANKAR RAO.—There is a sudden rise increasing the collection of tax. May I know the reason for such a great increase in the collection of tax ?

Sri T. MARIAPPA.—Efficiency of the Department.

Sri G. B. SHANKAR RAO.—It is not only with respect to collection of tax but also with respect to levy of tax. Why there is such a great increase in the levy as well as collection of tax during the year 58-59 ?

Sri T. MARIAPPA.—That shows efficiency in both channels.

Sri G. B. SHANKAR RAO.—Is it due to increase in the production of commercial crops or due to any other reason ?

Sri T. MARIAPPA.—Good assessment, tightening of recoveries and efficiency of the Department.

ಶ್ರೀ ಎಂ. ರಾಮಪ್ಪ.—1956-57ರಲ್ಲಿ ವಸೂಲಾದ ವ್ಯವಸಾಯ ವರಮಾನದ ತೆರಿಗೆ 1957-58ರಲ್ಲಿ ಕಡಮೆಯಾಗಿಯೂ, 1958-59ರಲ್ಲಿ ಜಾಸ್ತಿಯಾಗಿಯೂ ವಸೂಲಾದುದಕ್ಕೆ ಕಾರಣವೇನು ?